# *Press Clipping*

**Publication** : **Vijaya Karnataka**

**Date** : **June 9, 2016**

**Edition** : **State**

**Page** : **1+ 4, Lavalavike**

---

ಚಿತ್ರ : ರವೀಂದ್ರ ನಾಯಕ್



ಅಪೂರ್ವ ಕಾಸರವಳ್ಳಿ

# ನಿರುತ್ತರದಲ್ಲಿ ಸಂಬಂಧಗಳಿಗೆ ಉತ್ತರ: ಅಪೂರ್ವ

**ನಿರ್ದೇಶಕ ಗಿರೀಶ್ ಕಾಸರವಳ್ಳಿ ಪುತ್ರ, ಅಪೂರ್ವ ಕಾಸರವಳ್ಳಿ ಚಿತ್ರರಂಗಕ್ಕೆ ನಿರ್ದೇಶಕರಾಗಿ ಕಾಲಿಟ್ಟಿದ್ದಾರೆ. ತಮ್ಮ ನಿರುತ್ತರ ಚಿತ್ರದಲ್ಲಿ ಹೊಸ ಪ್ರಯತ್ನ ಮಾಡಿದ್ದರಿಂದ ಪ್ರೇಕ್ಷಕರಿಗೆ ಈ ಕುರಿತು ಒಂದಿಷ್ಟು ಕುತೂಹಲವಂತೂ ಇದೆ. ಇಂಥ ವೇಳೆ ಅಪೂರ್ವ ಜತೆಗಿನ ಮಾತುಕತೆ ಇಲ್ಲಿದೆ.**

**ಪದ್ಮಾ ಶಿವಮೊಗ್ಗ**
padmavathi.v@timesgroup.com

**ನೇರ ಮಾತು**

**ನಿರುತ್ತರ ಚಿತ್ರದ ಕಾನ್ಸೆಪ್ಟ್ ಏನು?**
ವಿಭಿನ್ನ ಕ್ಷೇತ್ರಗಳಲ್ಲಿ ಕೆಲಸ ಮಾಡುವ ನಾಲ್ವರ ಜೀವನ ಹೇಗಿರುತ್ತೆ, ಅವರ ನಡುವಿನ ಸಂಬಂಧಗಳ ಬಗ್ಗೆ ಕತೆ ಮಾಡಿದ್ದೇವೆ. ಇದು ಆರ್ಟ್ ಅಥವಾ ಕಮರ್ಷಿಯಲ್ ಚಿತ್ರ ಅಂತ ಹೇಳಲು ಸಾಧ್ಯವಾಗದ ಚಿತ್ರ. ಆದರೆ, ಇವೆರಡರ ಎಲಿಮೆಂಟ್‌ಗಳು ನಿರುತ್ತರ ಚಿತ್ರದಲ್ಲಿ ಇವೆ. ಜನರಿಗೆ ಚಿತ್ರ ತಲುಪಬೇಕು, ನಿರ್ಮಾಪಕರಿಗೆ ಹಣ ಬರಬೇಕು ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ಸಿನಿಮಾ ಮಾಡಿದ್ದೇವೆ.

**ರಿಯಲಿಸ್ಟಿಕ್ ಚಿತ್ರ ಇದಾಗಿದೆಯಾ?**
ಚಿತ್ರದಲ್ಲಿ ಡ್ರಾಮಾ ಇದೆ. ಸಿನಿಮಾ ನೋಡುವವರಿಗೆ ಚಿತ್ರದ ಕ್ಯಾರೆಕ್ಟರ್‌ಗಳು ಪರಿಚಯ ಇವೆ ಅಂತ ಅನ್ನಿಸಬಹುದು. ಕಂಟೆಂಪರರಿ ಬೆಂಗಳೂರಿನ ಕತೆ ಚಿತ್ರದಲ್ಲಿದೆ.

**ನಿಮ್ಮ ತಂದೆ ಗಿರೀಶ್ ಕಾಸರವಳ್ಳಿ ಅವರ ಸಿನಿಮಾ ಮೇಕಿಂಗ್ ಶೈಲಿ ಇಲ್ಲಿ ಕಾಣುತ್ತಾ?**
ಅವರ ಪ್ರಭಾವವಂತೂ ನನ್ನ ಮೇಲೆ ಇದೆ. ಒಮ್ಮೆ ಛಾಯಾಗ್ರಾಹಕ ರಾಮಚಂದ್ರ, ನಾನು ಶಾಟ್ ಹೇಳುವ ರೀತಿ ನೋಡಿ ನಿಮ್ಮಪ್ಪನೂ ಹೀಗೇ ಹೇಳುತ್ತಿದ್ದರು ಅಂದ್ರು. ಇರಬಹುದು. ಅವರ ಕೆಲಸವನ್ನು ಚಿಕ್ಕಂದಿನಿಂದ ನೋಡುತ್ತಾ ಬಂದಿದ್ದೇನೆ.

**ಗಿರೀಶ್ ಕಾದಂಬರಿ ಆಧಾರಿತ ಚಿತ್ರಗಳನ್ನೇ ಹೆಚ್ಚಾಗಿ ಸಿನಿಮಾ ಮಾಡಿದ್ದಾರೆ. ನಿಮ್ಮ ಆಯ್ಕೆ ಹೇಗಿದೆ?**
ನಾನೇ ಸ್ಟೋರಿ ಕ್ರಿಯೇಟ್ ಮಾಡೋಕೆ ಬಯಸುತ್ತೇನೆ. ಈ ಚಿತ್ರದ ಕಾನ್ಸೆಪ್ಟ್ ವಿಕ್ರಮ್ ಹತ್ವಾರ್ ಅವರದ್ದು. ಚಿತ್ರಕತೆ, ಸಂಭಾಷಣೆ ನನ್ನದು. ಸಿನಿಮಾ ಸ್ಟಕ್ಚರ್ ಬಹಳ ಡಿಫರೆಂಟ್ ಆಗಿದೆ.

**ನಿಮ್ಮ ಸಿನಿಮಾ ವಿಭಿನ್ನ ಅಂತ ನಿಮಗನ್ನಿಸಿದೆಯಾ?**
ಚಿತ್ರದಲ್ಲಿ ಪ್ರತಿಯೊಂದಕ್ಕೂ ಪ್ರಾಮುಖ್ಯತೆ ನೀಡಿದ್ದೇವೆ. 2 ತಿಂಗಳು ರಾಮಚಂದ್ರ ಅವರ ಜತೆ ಕೂತು ಪ್ಲಾನ್ ಮಾಡಿದ್ದು. ಕತೆ ಸಾಗಿದಂತೆಲ್ಲಾ ಮೂಡ್‌ಗೆ ತಕ್ಕಂತೆ ಸ್ಥಳಗಳನ್ನು, ಕಲರ್‌ಗಳನ್ನು ಬಳಸಿದ್ದೇವೆ. ಹಿಮಾಚಲ, ರಾಜಸ್ಥಾನ, ಗೋವಾ ಹೀಗೆ ಬೇರೆ ಕಡೆಗಳಲ್ಲಿ ಚಿತ್ರೀಕರಿಸಿದ್ದೇವೆ. ಇಬ್ಬರು ವ್ಯಕ್ತಿಗಳ ನಡುವಿನ ಸಂಬಂಧದ ಬಿರುಕು ಆಗಿದೆ ಎಂದಾಕ್ಷಣ ಡೆಸರ್ಟ್‌ನ ದೃಶ್ಯಗಳು ಬರುತ್ತವೆ. ಎಲ್ಲಾ ಸರಿ ಹೋಯ್ತು ಅಂದಾಗ ಗೋವಾದಲ್ಲಿ ಪಾರ್ಟಿ ದೃಶ್ಯಗಳನ್ನು ನೋಡಬಹುದು.

**ಕಮರ್ಷಿಯಲ್ ಸಿನಿಮಾ ಇಷ್ಟಪಡುವವರಿಗೆ ಈ ಚಿತ್ರದಲ್ಲಿ ಏನು ಇಷ್ಟವಾಗಬಹುದು?**
ನಿರುತ್ತರದಲ್ಲಿ ಜನರಿಗೆ ಕತೆ ಇಷ್ಟ ಆಗುತ್ತೆ. ಸಂಗೀತ ಹೊಸ ಥರ ಇರೋದ್ರಿಂದ ಮೆಚ್ಚುತ್ತಾರೆ. ಇನ್ನು ವಿಷ್ಯುಯಲ್ಸ್.. ರಾಮಚಂದ್ರ ಅವರ ಕೆಲಸ ಎಕ್ಸ್‌ಟ್ರಾರ್ಡಿನರಿ. ಮೈಂಡ್ ಬ್ಲೋಯಿಂಗ್ ಛಾಯಾಗ್ರಹಣ ಮಾಡಿದ್ದಾರೆ. ಫುಲ್ ಪ್ಯಾಕೇಜ್ ಸಿನಿಮಾ ಇದು.

**ಚಿತ್ರದ ನಟರ ಬಗ್ಗೆ ನಿಮ್ಮ ಅನಿಸಿಕೆ...?**
ಚಿತ್ರದಲ್ಲಿ ಹೀರೋ - ಹಿರೋಯಿನ್ ಅಂತ ಯಾರೂ ಇಲ್ಲ, ಎಲ್ಲವೂ ಮುಖ್ಯ ಪಾತ್ರಗಳೇ. ಕಿರಣ್ ಶ್ರೀನಿವಾಸ್, ಐಂದ್ರಿತಾ ರೇ, ರಾಹುಲ್ ಬೋಸ್, ಭಾವನಾ ಚೆನ್ನಾಗಿ ನಟಿಸಿದ್ದಾರೆ. ಒಬ್ಬೊಬ್ಬರದು ಒಂದೊಂದು ರೀತಿ ಕ್ಯಾರೆಕ್ಟರ್. ನಾನು ಎಲ್ಲರಿಗೂ ಮೊದಲೇ ಸ್ಕ್ರಿಪ್ಟ್ ಕೊಟ್ಟು, ಅವರು ಓದಿದ ನಂತರ ಅವರ ಜತೆ ಮಾತಾಡಿ ನಂತರ ಫಿಕ್ಸ್ ಮಾಡಿದ್ದು. ಅವರೆಲ್ಲಾ ಆ ಪಾತ್ರಗಳಿಗೆ ಪಕ್ಕಾ ಮ್ಯಾಚ್ ಆಗಿದ್ದಾರೆ. ರಾಹುಲ್ ಬೋಸ್ ಎಕ್ಸ್‌ಟ್ರಾರ್ಡಿನರಿ ಪರ್ಸನ್. ತುಂಬಾ ಶಿಸ್ತು. ಅವರೇ ಡಬ್ ಕೂಡಾ ಮಾಡಿದ್ದಾರೆ. ಸ್ಕ್ರಿಪ್ಟ್ ಓದಿದ ತಕ್ಷಣ ಒಪ್ಪಿಕೊಂಡರು. ಟ್ರೇಲರ್ ನೋಡಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಮುಂದುವರಿದ ಪುಟ... 04

## ಸಂಬಂಧಗಳಿಗೆ ಉತ್ತರ

ಮೊದಲ ಪುಟದಿಂದ...

**ಸಂಗೀತಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದೀರಿ...**
ಏಳು ಹಾಡುಗಳು ಚೆನ್ನಾಗಿ ಬಂದಿವೆ. ಚಿತ್ರದಲ್ಲಿ ಸಂಗೀತಗಾರನ ಪಾತ್ರವೊಂದಿದೆ. ಹಾಗಾಗಿ ಹಿಂದೂಸ್ತಾನಿ ಸಂಗೀತದ ಬೇಸ್‌ನಲ್ಲಿ ಫ್ಯೂಶನ್ ಸಂಗೀತ ಇದೆ. ಸಂಗೀತ ನಿರ್ದೇಶಕ ನೀಲಾದ್ರಿ ಪ್ರಬುದ್ಧ ಸಂಗೀತಗಾರರು. ಆಡಿಯೋಗೆ ತುಂಬಾ ಒಳ್ಳೆಯ ರೆಸ್ಪಾನ್ಸ್ ಸಿಕ್ಕಿದೆ.

**ನಿಮಗೆ ನಟರಾಗುವ ಆಸೆ ಇಲ್ಲವೆ?**
ಅಷ್ಟೊಂದು ಆಸಕ್ತಿ ಇಲ್ಲ, ಅಲ್ಲೊಂದು ಇಲ್ಲೊಂದು ಚಿತ್ರಗಳಲ್ಲಿ ನಟಿಸಿದ್ದೇನೆ.

**ಮನೆಯಲ್ಲಿ ಸಿನಿಮಾ ಜಗತ್ತೇ ಇದ್ದರೂ ನಿರ್ದೇಶಕರಾಗಲು ಇಷ್ಟು ತಡಮಾಡಿದ್ದು ಯಾಕೆ?**
ಜಾಹೀರಾತುಗಳಿಗಾಗಿ ಕೆಲಸ ಮಾಡುತ್ತಿದ್ದೆ, ಬಹಳ ಬೋರ್ ಆಯ್ತು. ಕೊನೆಗೆ ಆಸ್ಟ್ರೇಲಿಯಾಕ್ಕೆ ಸಿನಿಮಾ ಬಗ್ಗೆ ಸ್ಟಡಿ ಮಾಡಲು ಹೋದೆ. ಒಂದೂವರೆ ವರ್ಷ ಕೋರ್ಸ್ ಮಾಡಿದೆ. ನನಗೆ ಸಿನಿಮಾಟೋಗ್ರಫಿಯಲ್ಲಿ ಆಸಕ್ತಿ ಇತ್ತು. ಚೆನ್ನೈನಲ್ಲಿ ಛಾಯಾಗ್ರಾಹಕ ಚಿರು ಅವರಿಗೆ ಅಸಿಸ್ಟೆಂಟ್ ಆಗಿ ಕೆಲ ಸಿನಿಮಾಗಳಿಗೆ ಕೆಲಸ ಮಾಡಿದೆ. ಅಲ್ಲಿಂದ ಬಂದ ಮೇಲೆ ಧಾರಾವಾಹಿಗಳಿಗೆ ಕೆಲಸ. 3 ವರ್ಷ ಹೀಗೇ ಹೋಯ್ತು. ಈಗ ಕಾಲ ಕೂಡಿಬಂದಿದೆ. ■